ಮಲಪ್ರಭ ಯೋಜನೆಯಡಿಯಲ್ಲಿ ಮುಳುಗಡೆಯಾದ ಗ್ರಾಮಗಳಾದ ಏಣಗಿ, ಹಿಟ್ಟಣಗಿ ಗ್ರಾಮದ ಜನರ- ಜಮೀನುಗಳಿಗೆ ನೀರಾವರಿ.

2235(2901)

ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಬೈಲಹೊಂಗಲ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ, ಸವದತ್ತಿ ತಾಲ್ಲೂಕಿನ ಮಲಪ್ರಭಾ ಯೋಜನೆಯಡಿಯಲ್ಲಿ ಮುಳಗಡೆಯಾದ ಏಣಗಿ-ಹಿಟ್ಟಣಗಿ ಗ್ರಾಮದ ಜನರ ಜಮೀನುಗಳಿಗೆ ಆಗ್‌ಮೆಂಟೇಶನ್ ಯೋಜನೆಯಡಿಯಲ್ಲಿ ನೀರು ಒದಗಿಸಲು ಅಂದಾಜು ಪತ್ರಿಕೆ ತಯಾರಿಸಲಾಗಿದೆಯೇ ಹಾಗೂ ಈ ಯೋಜನೆಗೆ ಎಷ್ಟು ವೆಚ್ಚ ತಗಲುವುದು ಮತ್ತು ಎಷ್ಟು ಎಕರೆ ಜಮೀನು ನೀರಾವರಿಯಾಗುವುದು?

ಆ) ಹಾಗೂ ಈ ಕೆಲಸವು ಯಾವ ಹಂತದಲ್ಲಿರುವುದು?

ಇ) ಎಂದು ಈ ಕೆಲಸಕ್ಕೆ ಮಂಜೂರಾತಿಯನ್ನು ನೀಡಲಾಗುವುದು? ಹಾಗೂ ಎಂದು ಈ ಕೆಲಸವನ್ನು ಪ್ರಾರಂಭ ಮಾಡಲಾಗುವುದು?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತುಮಧ್ಯಮ ನೀರಾವರಿ ಸಚಿವರು):

ಅ) ಏಣಗಿ-ಹಿಟ್ಟಣಗಿ ಗ್ರಾಮದ ಜಮೀನುಗಳಿಗೆ ಆಗ್‌ಮೆಂಟೇಶನ್ ಯೋಜನೆಯಡಿಯಲ್ಲಿ ನೀರು ಒದಗಿಸಲು ಪ್ರಸ್ತಾವನೆಯನ್ನು ತಯಾರಿಸಲಾಗಿದೆ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ರೂ.95.60 ಲಕ್ಷ. ಈ ಯೋಜನೆಯಿಂದ 900 ಎಕರೆ ಜಮೀನಿಗೆ ಹಾಲಿ ಇರುವ ನೀರಿನ ಕೊರತೆ ನಿವಾರಿಸಲು ಉದ್ದೇಶಿಸಲಾಗಿದೆ.

ಆ ಮತ್ತು ಇ) ಮಲಪ್ರಭಾ ಯೋಜನೆಯ ನೀರಿನ ಕೊರತೆ ನಿವಾರಿಸಲು ಕೆಲವು ಪರ್ಯಾಯ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ. ಇವು ಅಂತಿಮಗೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಜನರಿಗೆ ಆಗಮೆಂಟೇಷನ್ ಯೋಜನೆಯಡಿಯಲ್ಲಿ ನೀರಾವರಿ.

2236(2902)

ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ, (ಬೈಲಹೊಂಗಲ): ಮಾನ್ಯ ಭಾರಿ ಮತ್ತು

ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮ ಮುನರ್ವಸತಿ ಹೊಂದಿದ ಗ್ರಾಮವಾಗಿದ್ದು, ಇಲ್ಲಿನ ಜನರ ಅನುಕೂಲತೆಗಾಗಿ ಆಗ್‌ಮೆಂಟೇಶನ್ ಯೋಜನೆಯಡಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಅಂದಾಜು ವೆಚ್ಚ ಪತ್ರಿಕೆ ತಯಾರಿಸಲಾಗಿದೆಯೆ? ಹಾಗಿದ್ದಲ್ಲಿ ಈ ಯೋಜನೆಗೆ ಎಷ್ಟು ವೆಚ್ಚ ತಗಲುವುದು? ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಸಿಗುವುದು?

ಆ) ಈ ಯೋಜನೆ ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಈ ಯೋಜನೆ ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಹತ್ತಿರ ಆಗ್‌ಮೆಂಟೇಶನ್ ಮಾಡುವ ಪ್ರಸ್ತಾವನೆಯ ಪ್ರಾಥಮಿಕ ವರದಿ ತಯಾರಿಸಲಾಗಿದೆ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ರೂ. 192.21 ಲಕ್ಷ. ಈ ಯೋಜನೆಯಿಂದ 99030 ಎಕರೆ ಜಮೀನಿಗೆ ಹಾಲಿ ಇರುವ ನೀರಿನ ಕೊರತೆ ನಿವಾರಿಸಲು ಉದ್ದೇಶಿಸಲಾಗಿದೆ.

ಆ) ಮಲಪ್ರಭಾ ಯೋಜನೆಯ ನೀರಿನ ಕೊರತೆ ನಿವಾರಿಸಲು ಕೆಲವು ಪರ್ಯಾಯ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ. ಇವು ಅಂತಿಮಗೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಬೆಳಗಾಂವ್ ಜಿಲ್ಲೆ ಬೈಲಹೊಂಗಲ ಮತ ಕ್ಷೇತ್ರದಲ್ಲಿ ಬರುವ ಚಿಕ್ಕ ನೀರಾವರಿ ಇಲಾಖೆಯ ಕೆರೆಗಳ ಹೂಳು ತೆಗೆಯುವ ಬಗ್ಗೆ.

2237(2903)

ಶ್ರೀ ಎಂ.ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಬೆಳಗಾಂವ ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಹೂಳನ್ನು ತೆಗೆಯಲು ಯಾವ ವಿಶೇಷ ಕಾರ್ಯಕ್ರಮ ಹಾಕಿಕೊಂಡಿದೆ.

ಆ) ಕೋಲಾರ ಜಿಲ್ಲೆಯಲ್ಲಿ ಚಿಕ್ಕ ನೀರಾವರಿ ಇಲಾಖೆಯ ಕೆರೆಗಳ ಹೂಳು ತೆಗೆಯಲು ಹಾಕಿಕೊಂಡ ಕಾರ್ಯಕ್ರಮ ಮಾದರಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿಯೂ